RAGHAVENDRA G
Digitally signed by RAGHAVENDRA G
Date: 2024.07.04 17:36:27 +0530

## **3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ**

**ಉಪಸ್ಥಿತಿ**

ಶ್ರೀ.ರಾಘವೇಂದ್ರ ಜಿ.
ಬಿ.ಎಸ್.ಸಿ., ಎಲ್.ಎಲ್.ಬಿ
**3** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ

**ದಿನಾಂಕಃ 04.07.2024.**

**ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆಃ 532/2024**

| | |
|---|---|
| ಅರ್ಜಿದಾರರು/<br>ಆರೋಪಿ **1** ರಿಂದ **3 :** | 1. ರಾಜು ಎಂ ಬಿ,<br>ಬಿನ್. ವೆಂಕಟಯ್ಯ,<br>ವಯಸ್ಸು ಸುಮಾರು: 29 ವರ್ಷ,<br>ಉದ್ಯೋಗ: ಕೂಲಿ,<br><br>2. ಶ್ರೀ. ವೆಂಕಟೇಶ್ ಎಂ ಎಂ,<br>ಬಿನ್. ಮರಿಯಪ್ಪ,<br>ವಯಸ್ಸು ಸುಮಾರು: 44 ವರ್ಷ,<br>ಉದ್ಯೋಗ: ರೈತ<br><br>3. ಶ್ರೀ. ಸಂಜಯ್ @ ವೆಂಕಟರಾಜು ಎ ಸಿ,<br>ಬಿನ್ ಚಂದ್ರಪ್ಪ,<br>ವಯಸ್ಸು ಸುಮಾರು: 20 ವರ್ಷ,<br>ಉದ್ಯೋಗ: ಕೂಲಿ,<br><br>ಎಲ್ಲರ ವಾಸ :- ಮಂಚನಬೆಲೆ ಗ್ರಾಮ,<br>ಮಡಬಳ್ ಹೋಬಳಿ,<br>ಮಾಗಡಿ ತಾಲ್ಲೂಕು,<br>ರಾಮನಗರ ಜಿಲ್ಲೆ.<br><br>(ಶ್ರೀ ಅವಿನಾಶ್ ಎಲ್, ವಕೀಲರು) |
| ಎದುರುದಾರ **:** | ಕರ್ನಾಟಕ ಸರ್ಕಾರದ ಪರ<br>ತಾವರೆಕೆರೆ ಆರಕ್ಷಕ ಠಾಣೆ,<br><br>(ಸರ್ಕಾರಿ ಅಭಿಯೋಜಕರು) |

## ಆದೇಶ

**1.** ಈ ಅಪರಾಧಿಕ ಸಂಕೀರ್ಣ ಅರ್ಜಿಯನ್ನು ಅಪರಾಧಿಕ ಪ್ರಕ್ರಿಯಾ ಸಂಹಿತೆ, **1973** ರ ಕಲಂ **438** ರಡಿ ಅರ್ಜಿದಾರರು/ ಆರೋಪಿ-**1** ರಿಂದ **3** ರವರು ಎದುರುದಾರ – ತಾವರೆಕೆರೆ ಆರಕ್ಷಕ ಠಾಣೆಯವರು ನೋಂದಣಿ ಮಾಡಿರುವ ಅಪರಾಧ ಸಂಖ್ಯೆ **187/2024**, ಭಾರತ ದಂಡ ಸಂಹಿತೆ, **1860** ರ ಕಲಂ **143, 147, 448, 323, 324, 325, 354** ಬಿ, **504** ಜೊತೆಗೆ **149** ರಲ್ಲಿ ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

**2.** ಮಾನ್ಯ ಸರ್ಕಾರಿ ಅಭಿಯೋಜಕರು ಈ ಅಪರಾಧಿಕ ಸಂಕೀರ್ಣ ಅರ್ಜಿಗೆ ತಕರಾರು ಸಲ್ಲಿಸಿದ್ದು ಜೊತೆಗೆ ತನಿಖಾಧಿಕಾರಿಯವರ ತಕರಾರು ಮನವಿಯನ್ನು ಇತರೆ ದಾಖಲೆಗಳ ಜೊತೆಗೆ ಸಲ್ಲಿಸಿರುತ್ತಾರೆ.

**3.** ಅರ್ಜಿದಾರರ ವಕೀಲರ ಮತ್ತು ಮಾನ್ಯ ಸರ್ಕಾರಿ ಅಭಿಯೋಜಕರ ವಾದ ಆಲಿಸಿರುತ್ತದೆ.

**4.** ಅಪರಾಧಿಕ ಸಂಕೀರ್ಣ ಅರ್ಜಿಯಲ್ಲಿನ ಸಂಗತಿಗಳು, ಅಪರಾಧಿಕ ಸಂಕೀರ್ಣ ಅರ್ಜಿಗೆ ಸಲ್ಲಿಸಿರುವ ತಕರಾರಿನಲ್ಲಿನ ನಿಲುವುಗಳು ಮತ್ತು ಅರ್ಜಿದಾರರ ವಕೀಲರ ಮತ್ತು ಮಾನ್ಯ ಸರ್ಕಾರಿ ಅಭಿಯೋಜಕರ ವಾದದ ಆಧಾರದ ಮೇಲೆ ಈ ಕೆಳಗೆ ಹೇಳಿದ ಅಂಶಗಳು ನನ್ನ ಪರಿಗಣನೆಗೆ ಬಂದಿರುತ್ತವೆ.

ಅಂಶ-**1** : ಅರ್ಜಿದಾರರು/ ಆರೋಪಿ-**1** ರಿಂದ **3** ರವರು ನಿರೀಕ್ಷಣಾ ಜಾಮೀನು ನೀಡುವಂತೆ ನಿರ್ದೇಶನ ನೀಡಲು ಕಾರಣಗಳನ್ನು ತೋರಿಸಿ ಕೊಟ್ಟಿರುತ್ತಾರೆಯೇ?

ಅಂಶ-**2** : ಏನು ಆದೇಶ?

**5.** ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಗೆ ಹೇಳಿದಂತೆ ಇರುತ್ತದೆ.

ಅಂಶ-**1** : ಸಕಾರಾತ್ಮಕ.

ಅಂಶ-**2** : ಅಂತಿಮ ಆದೇಶದಂತೆ.

## ಕಾರಣಗಳು

**6.** ಅರ್ಜಿದಾರರು ಮತ್ತು ಮಾನ್ಯ ಸರ್ಕಾರಿ ಅಭಿಯೋಜಕರು ಹಾಜರುಪಡಿಸಿರುವ

ದಾಖಲೆಗಳನ್ನು ಅವಲೋಕನ ಮಾಡಿರುತ್ತದೆ. ದಿನಾಂಕಃ **06.06.2024** ರ ಮಧ್ಯಾಹ್ನ **1.00** ಗಂಟೆಗೆ ಮುಖ್ಯ ಪೇದೆ **304,** ತಾವರೆಕೆರೆ ಆರಕ್ಷಕ ಠಾಣೆ ಇವರು ಶ್ರೀ. ರವಿ.ಎಂ.ಹೆಚ್., ಎನ್ನುವವರ ಹೇಳಿಕೆಯನ್ನು ಸುರಕ್ಷ ಆಸ್ಪತ್ರೆಯಲ್ಲಿ ಪಡೆದು ತಂದು ಹಾಜರುಪಡಿಸಿದ್ದರ ಆಧಾರದ ಮೇರೆಗೆ ಅಪರಾಧ ಸಂಖ್ಯೆ **187/2024,** ಭಾರತ ದಂಡ ಸಂಹಿತೆ, **1860** ರ ಕಲಂ **143, 147, 448, 323, 324, 325, 354** ಬಿ, **504** ಜೊತೆಗೆ **149** ರ ಅಡಿ ಅಪರಾಧ ಎಸಗಿರುತ್ತಾರೆ ಎಂದು ಅರ್ಜಿದಾರರು/ಆರೋಪಿ-**1** ರಿಂದ **3** ಮತ್ತು ಇತರೆ **30** ರಿಂದ **35** ಜನ ಅಪರಿಚಿತರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

**7.** ಪಿರ್ಯಾದಿ ತನ್ನ ದೂರಿನಲ್ಲಿ ಈ ಮುಂದೆ ಹೇಳಿದಂತೆ ದೂರಿರುತ್ತಾರೆ. ದಿನಾಂಕ **02.06.2024** ರಂದು ರಾತ್ರಿ ಸುಮಾರು **9.00** ಗಂಟೆ ಸಮಯದಲ್ಲಿ ಮಂಚನಬೆಲೆ ಗ್ರಾಮದ ಎಸ್.ಎಲ್.ಎನ್. ವೈನ್ಸ್ ಮಾಲೀಕರಾದ ನರಸೇಗೌಡರಿಗೆ ಆರೋಪಿ-**1** ಮತ್ತು **2** ಬಾರ್ ಹತ್ತಿರ ಮದ್ಯಪಾನ ಮಾಡಲು ಬಂದು ಗಲಾಟೆ ಮಾಡಿರುತ್ತಾರೆ. ಈ ಕುರಿತು ನ್ಯಾಯ ತೀರ್ಮಾನ ಮಾಡಲು ದಿನಾಂಕ **05.06.2024** ರಂದು ಬೆಳಿಗ್ಗೆ **8.00** ಗಂಟೆ ಸಮಯಕ್ಕೆ ಗ್ರಾಮಸ್ಥರು ಸೇರಿದ್ದು ಆರೋಪಿ-**1** ಮತ್ತು **2** ರವರಿಗೆ ಕರೆದಿದ್ದು, ಅವರು ಬರದೆ ಇದ್ದಾಗ ಪಿರ್ಯಾದಿ ಈ ರೀತಿ ಆದರೆ ಮುಂದೇನು ಎಂದು ಹೇಳಿ ಮನೆಗೆ ಹೋಗಿರುತ್ತಾರೆ. ಅದೇ ದಿನ ಸಾಯಂಕಾಲ **7.30** ರ ಸಮಯಕ್ಕೆ ಪಿರ್ಯಾದಿ ತನ್ನ ಮನೆ ಒಳಗೆ ಇದ್ದಾಗ ಆರೋಪಿ **-1** ರಿಂದ **3** ಮತ್ತು ಅವರ ಜೊತೆಯಲ್ಲಿ ಸುಮಾರು **30** ರಿಂದ **35** ಜನ ಕರೆದುಕೊಂಡು ಬಂದು ಪಿರ್ಯಾದಿ ಮನೆ ಬಾಗಿಲು ತಟ್ಟಿ ಹೊರಗೆ ಬಾರೋ ಬೋಳಿ ಮಗನೇ ಎಂದು ಅವಾಚ್ಯ ಶಬ್ಧಗಳಿಂದ ಕಿರುಚಾಡಿರುತ್ತಾರೆ. ಪಿರ್ಯಾದಿ ಹೆಂಡತಿ ಬಾಗಿಲು ತೆಗೆದಾಗ ಏಕಾಏಕಿ ಮನೆ ಒಳಗೆ ನುಗ್ಗಿ ದೊಣ್ಣೆ ಮತ್ತು ಮಚ್ಚುಗಳು ಮತ್ತು ಮದ್ಯದ ಬಾಟಲುಗಳಿಂದ ಪಿರ್ಯಾದಿಗೆ ಹೊಡೆದಿದ್ದು, ಪಿರ್ಯಾದಿ ಕೆಳಗೆ ಬಿದ್ದಾಗ ಕಾಲುಗಳಿಂದ ತುಳಿದಿರುತ್ತಾರೆ. ಬಿಡಿಸಲು ಬಂದ ಪಿರ್ಯಾದಿ ಹೆಂಡತಿಗೂ ಹೊಡೆದು, ತಳ್ಳಾಡಿ, ಬಟ್ಟೆಗಳನ್ನು ಎಳೆದಾಡಿ ತಾಳಿ ಸರವನ್ನು ಕಿತ್ತು ಹಾಕಿರುತ್ತಾರೆ. ನಂತರ ಅಲ್ಲಿಗೆ ಬಂದ ಪಿರ್ಯಾದಿಯ ಸಂಬಂಧಿ ಅತ್ತೆಗೂ ಸಹ ತಳ್ಳಾಡಿ ಕೆಳಗೆ ಬೀಳಿಸಿ ಮುಖಕ್ಕೆ ಹೊಡೆದಿದ್ದು ದವಡೆ ಹಲ್ಲು ಅಲ್ಲಾಡುತ್ತಿದ್ದು ಮುರಿದು ಹೋಗಿದ್ದು ತಲೆಗೆ ಏಟಾಗಿರುತ್ತದೆ. ಪಿರ್ಯಾದಿ ತಪ್ಪಿಸಿಕೊಂಡು ತನ್ನ ತಂದೆ ಮನೆ ಹತ್ತಿರ ಹೋದಾಗ ಆರೋಪಿ-3 ಅಲ್ಲಿಗೆ ಬಂದು ಕೈಯಲ್ಲಿದ್ದ ಮಚ್ಚನ್ನು ಬೀಸಿದ್ದು ಅಲ್ಲೆ ಇದ್ದ ರಾಜು ಎನ್ನುವವರಿಗೆ ಕೈಗೆ ಗಾಯವಾಗಿರುತ್ತದೆ.

**8.** ಅರ್ಜಿದಾರರು/ಆರೋಪಿ-**1** ರಿಂದ **3** ತಾವು ನಿರೀಕ್ಷಣಾ ಜಾಮೀನಿಗೆ ಅರ್ಹರಾಗಿರುತ್ತೇವೆ ಎಂದು ತೋರಿಸಲು ಈ ಕೆಳಗೆ ಹೇಳಿದ ಕಾರಣಗಳನ್ನು ಹೇಳಿರುತ್ತಾರೆ.

**1)** ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದೂರನ್ನು ನೀಡಿದ್ದು ಒಂದು ದಿನ ತಡವಾಗಿ ದೂರು ಕೊಟ್ಟಿದ್ದು, ವಿಳಂಬಕ್ಕೆ ವಿವರಣೆ ಕೊಟ್ಟಿಲ್ಲ.

**2)** ಪಿರ್ಯಾದಿ ಮತ್ತು ಇತರರು ಆರೋಪಿ-1 ರವರ ಮೇಲೆ ಹಲ್ಲೆ ಮಾಡಿರುವ ಕುರಿತು ಅಪರಾಧ ಸಂಖ್ಯೆ 188/2024 ರಡಿ ಪ್ರಕರಣ ದಾಖಲಾಗಿರುತ್ತದೆ.

**9.** ಅರ್ಜಿದಾರರು/ಆರೋಪಿ-1 ರಿಂದ 3 ರವರ ವಿರುದ್ಧ ಆರೋಪಿಸಿರುವ ಭಾರತ ದಂಡ ಸಂಹಿತೆ, ಕಲಂಗಳಲ್ಲಿ 325 ಮತ್ತು 354 ಬಿ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಅಥವಾ ಸರಳ ಕಾರಾಗೃಹ ಶಿಕ್ಷೆ ವಿಧಿಸಬಹುದಾದ ಅಪರಾಧ ಆಗಿರುತ್ತದೆ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಿಂದ ವಿಚಾರಣೆ ಆಗುವ ಆರೋಪ ಆಗಿರುತ್ತದೆ.

**10.** **(2021) 6** ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು **64 (**ನಾಥೂ ಸಿಂಗ್ ವಿರುದ್ಧ ಉತ್ತರ ಪ್ರದೇಶ್ ರಾಜ್ಯ ಮತ್ತು ಇತರರು**)** ರಲ್ಲಿ ವರದಿಯಾಗಿರುವ ತೀರ್ಪಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ವಾಕ್ಯ ವೃಂದ **19** ಮತ್ತು **24** ರಲ್ಲಿ ಈ ಕೆಳಗೆ ಹೇಳಿದಂತೆ ಅಭಿಪ್ರಾಯ ಪಟ್ಟಿರುತ್ತಾರೆ.

> “19. At first blush, while this submission appears to be attractive, we are of the opinion that such an analysis of the provision is incomplete. It is no longer res integra that any interpretation of the provisions of Section 438 Cr.P.C. has to take into considerations the fact that the grant or rejection of an application under section 438 Cr.P.C. has a direct bearing on the fundamental right to life and liberty of an individual. The genesis of this jurisdiction lies in Article 21 of the Constitution, as an effective medium to protect the life and liberty of in individual. The provision therefore needs to be read liberally, and considering it’s beneficial nature, the courts must not read in limitations or restrictions that the legislature have not explicity provided for. Any ambiguity in the language must be resolved in favour of the applicant seeking relief. In this context, this court, in the Constitution

Bench decision of this Court in Gurbaksh Singh Sibbia v. State of Pujab, which was recently upheld and followed by this Court in Sushila Aggarwal (at SCC p. 56, para 14, held as follows: (Gurbaksh Singh Sibbia Case, SCC p. 586, para 26)

"26. We find a great deal of substance in Mr. Tarkunde's submission that since denial of bail amounts to deprivation of personal liberty, the court should lean against the imposition of unnecessary restrictions on the scope of Section 438, especially when no such restriction have been imposed by the legislature in the terms of that section. Section 438 is procedural provisional which is concerned with personal liberty of the individual, who is entitled to the benefit of the presumption of innocence since he is not on the date of his application for anticipatory bail, convicted of the offence in respect of which he seeks bail. An over-generous infusion of constraints and conditions which are not to be found in Section 438 can make its provisions constitutionally vulnerable since the right to personal freedom cannot be made to depend on compliance with unreasonable restrictions. The beneficent provision contained in Section 438 must be saved, not jettisoned."

(emphasis supplied)

…………………………………………………………………………………

24. However, such discretionary power cannot be exercised in an untrammelled manner. The court must take into account the statutory scheme under Section 438 Cr.P.C, particularly, the proviso the Section 438(1) Cr.P.C.,

and balance the concerns of the investigation agency, the complainant and the society at large with the concerns/ interest of the applicant. Therefore, such an order must necessarily be narrowly tailored to protect the interest of the applicant while taking into consideration the concerns of the investigating authority. Such an order must be a reasoned one.

**11.** ಅರ್ಜಿದಾರ/ಆರೋಪಿ **1** ರಿಂದ **3** ರವರು ಆರೋಪಿ-**1** ವಿಕ್ಟೋರಿಯ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವಾಗ ನೀಡಿರುವುದರ ಹೇಳಿಕೆ ದಿನಾಂಕ **06.06.2024** ರ ಸಂಜೆ **4.00** ಗಂಟೆಗೆ ತಂದು ಹಾಜರು ಪಡಿಸಿದ್ದರ ಆಧಾರದ ಮೇರೆಗೆ ಅಪರಾಧ ಸಂಖ್ಯೆ **188/2024,** ಭಾರತ ದಂಡ ಸಂಹಿತೆ**, 1860** ರ ಕಲಂ **323, 324, 354** ಎ**, 504** ಜೊತೆಗೆ **34** ರಡಿ ಪಿರ್ಯಾದಿ ಮತ್ತು ಇತರರು ಅಪರಾಧ ಮಾಡಿರುತ್ತಾರೆಂದು ದಾಖಲಾಗಿರುವ ಪ್ರಥಮ ವರ್ತಮಾನ ವರದಿ ಮತ್ತು ಹೇಳಿಕೆ ಪ್ರತಿ ಹಾಜರುಪಡಿಸಿರುತ್ತಾರೆ.

**12.** ಅರ್ಜಿದಾರ/ಆರೋಪಿ **1** ರಿಂದ **3** ರವರು ತಮ್ಮ ವಿಳಾಸವನ್ನು ತೋರಿಸಲು ತಮ್ಮ ಆಧಾರ್ ಕಾರ್ಡ್‌ನ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಮೇಲೆ ಹೇಳಿದ ತೀರ್ಪಿನಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯದಂತೆ ಮಾನ್ಯ ಸರ್ಕಾರಿ ಅಭಿಯೋಜಕರು ಸಲ್ಲಿಸಿರುವ ತಕರಾರನ್ನು ಸೂಕ್ತ ಷರತ್ತುಗಳನ್ನು ವಿಧಿಸುವುದರ ಮೂಲಕ ಮಾನ್ಯ ಮಾಡಬಹುದಾಗಿರುತ್ತದೆ.

**13.** ಮೇಲೆ ಚರ್ಚಿಸಿರುವ ಕಾರಣಗಳಿಗಾಗಿ ಅರ್ಜಿದಾರರು/ಆರೋಪಿ-**1** ರಿಂದ **3** ರವರು ನಿರೀಕ್ಷಣಾ ಜಾಮೀನು ನೀಡುವಂತೆ ನಿರ್ದೇಶನ ನೀಡಲು ಕಾರಣಗಳನ್ನು ತೋರಿಸಿ ಕೊಡುವಲ್ಲಿ ಸಫಲರಾಗಿರುತ್ತಾರೆ ಎನ್ನುವ ಅಭಿಪ್ರಾಯಕ್ಕೆ ಈ ನ್ಯಾಯಾಲಯ ಬಂದಿರುತ್ತದೆ. ಆದ್ದರಿಂದ, ಅಂಶಃ1 ನ್ನು ಸಕಾರಾತ್ಮಕ ಎಂದು ಉತ್ತರಿಸಿರುತ್ತದೆ.

**14.** ಅಂಶ 2 : ಅಂಶ **1** ಕ್ಕೆ ಬಂದಿರುವ ಉತ್ತರಕ್ಕೆ ಅನುಸಾರ ಈ ಕೆಳಗಿನಂತೆ ಆದೇಶ,

## ಆದೇಶ

ಅಪರಾಧಿಕ ಪ್ರಕ್ರಿಯಾ ಸಂಹಿತೆ, 1973 ರ ಕಲಂ 438 ರಡಿ ಅರ್ಜಿದಾರರು/ಆರೋಪಿ-**1**

ರಿಂದ **3** ಸಲ್ಲಿಸಿರುವ ಅಪರಾಧಿಕ ಸಂಕೀರ್ಣ ಅರ್ಜಿಯನ್ನು ಪುರಸ್ಕರಿಸಿರುತ್ತದೆ.

ಅರ್ಜಿದಾರರು/ಆರೋಪಿ-**1** ರಿಂದ **3** ರವರು ಎದುರುದಾರ – ತಾವರೆಕೆರೆ ಆರಕ್ಷಕ ಠಾಣೆಯವರು ನೋಂದಣಿ ಮಾಡಿರುವ ಅಪರಾಧ ಸಂಖ್ಯೆ **187/2024**, ಭಾರತ ದಂಡ ಸಂಹಿತೆ, **1860** ರ ಕಲಂ **143, 147, 448, 323, 324, 325, 354** ಬಿ, **504** ಜೊತೆಗೆ **149** ರಲ್ಲಿ ಬಂಧಿಸಲ್ಪಟ್ಟಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಲು ಈ ಕೆಳಗೆ ಹೇಳಿದ ಷರತ್ತುಗಳಿಗೆ ಒಳಪಟ್ಟು ಹಕ್ಕುದಾರರಾಗಿರುತ್ತಾರೆ.

1. ಅರ್ಜಿದಾರರು/ಆರೋಪಿ-**1** ರಿಂದ **3** ರವರು ತನಿಖಾಧಿಕಾರಿ ಮುಂದೆ ಈ ಆದೇಶದ ದಿನಾಂಕದಿಂದ 15 ದಿನದ ಒಳಗೆ ಹಾಜರಾಗಲು ನಿರ್ದೇಶನ ನೀಡಿರುತ್ತದೆ.

2. ಅರ್ಜಿದಾರರು/ಆರೋಪಿ-**1** ರಿಂದ **3** ರವರು ತನಿಖಾಧಿಕಾರಿ ಮುಂದೆ ಹಾಜರಾದ ನಂತರ ತಲಾ ರೂ. 50,000/- ಮೊತ್ತಕ್ಕೆ ವೈಯುಕ್ತಿಕ ಬಂಧ ಪತ್ರ ಮತ್ತು ಅದೇ ಮೊತ್ತಕ್ಕೆ ಒಬ್ಬರು ಜಾಮೀನುದಾರರನ್ನು ಪಡೆದು ಜಾಮೀನಿನ ಮೇಲೆ ಬಿಡತಕ್ಕದ್ದು.

3. ಅರ್ಜಿದಾರರು/ಆರೋಪಿ-**1** ರಿಂದ **3** ರವರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಈ ಪ್ರಕರಣದ ಸಂಗತಿಗಳ ಕುರಿತು ತಿಳಿದಿರುವ ಯಾವುದೇ ವ್ಯಕ್ತಿಗೆ ಬೆದರಿಸುವುದಾಗಲಿ, ವಾಗ್ದಾನ ಮಾಡುವುದಾಗಲಿ ಅಥವಾ ಪುಸಲಾಯಿಸುವುದಾಗಲಿ ಮಾಡತಕ್ಕದ್ದಲ್ಲ.

4. ಅರ್ಜಿದಾರರು/ಆರೋಪಿ-**1** ರಿಂದ **3** ರವರು ತನಿಖೆಗೆ ತನಿಖಾಧಿಕಾರಿಯವರಿಗೆ ಸಹಕರಿಸತಕ್ಕದ್ದು.

5. ಅರ್ಜಿದಾರರು/ಆರೋಪಿ-**1** ರಿಂದ **3** ರವರು ಈ ಪ್ರಕರಣದಲ್ಲಿ ಆರೋಪಿಸಿರುವ ಆರೋಪದ ಸ್ವರೂಪದ ಅಪರಾಧ ಅಥವಾ ಯಾವುದೇ ಅಪರಾಧ ಮಾಡತಕ್ಕದ್ದಲ್ಲ.

6. ಅರ್ಜಿದಾರರು/ಆರೋಪಿ-**1** ರಿಂದ **3** ರವರು ಪ್ರತಿ ತಿಂಗಳ ಮೂರನೇ ಶನಿವಾರದಂದು ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ರ ಒಳಗೆ ಸಂಬಂಧಿಸಿದ ಠಾಣೆಗೆ ಹಾಜರಾಗಿ ದೋಷಾರೋಪಣೆ ಪಟ್ಟಿ ಸಲ್ಲಿಸುವವರೆಗೆ ಸಹಿ ಹಾಕತಕ್ಕದ್ದು.

(ಬೆರಳಚ್ಚುಗಾರಳಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖನ ನೀಡಿದ್ದು, ಬೆರಳಚ್ಚು ಮಾಡಿದ ನಂತರ ತಿದ್ದಿ ಸಹಿ ಮಾಡಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ದಿನಾಂಕಃ 04.07.2024 ರಂದು ಉದ್ಘೋಷಣೆ ಮಾಡಲಾಯಿತು.)

(ಶ್ರೀ.ರಾಘವೇಂದ್ರ ಜಿ. )
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ